159ನೀ೮೦
(33)

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಸೂಚನೆ ಸಂಖ್ಯೆ:33ಕ್ಕೆ ಉತ್ತರ.

**ವಿಷಯ:**

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ವಾಬಸಂದ್ರ, ತಿರುಪಾಳ್ಯ, ಗವಿಕೆರೆ,( ವಾಬಸಂದ್ರ-2) ಹಾಗೂ ಯಾರಂಡನಹಳ್ಳಿ, ಕೆರೆಗಳನ್ನು ಕೆ.ಸಿ.ವ್ಯಾಲಿ ಯೋಜನೆಯಡಿ ಸೇರ್ಪಡೆಗೊಳಿಸಿ ನೀರು ತುಂಬಿಸುವ ಯೋಜನೆ ಕಳೆದ 3 ವರ್ಷಗಳಿಂದ ಯಾವುದೇ ಶಾಶ್ವತ ಕ್ರಮಕೈಗೊಂಡಿಲ್ಲ. ಆನೇಕಲ್ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ 69 ಕೆರೆಗಳಿಗೆ ನೀರು ತುಂಬಿಸುವ ಉದ್ದೇಶ ಹೊಂದಲಾಗಿದೆ. ಆದರೆ ಸದರಿ ಯೋಜನೆಯಡಿ ವಾಬಸಂದ್ರ ಕೆರೆ, ತಿರುಪಾಳ್ಯ ಕೆರೆ, ಗವಿಕೆರೆ,(ವಾಬಸಂದ್ರ-2) ಹಾಗೂ ಯಾರಂಡನಹಳ್ಳಿ ಕೆರೆಗಳನ್ನು ಕೈಬಿಡಲಾಗಿದೆ. ಈ ಕೆರೆಗಳನ್ನು ಯೋಜನೆಯಡಿ ಸೇರ್ಪಡೆಗೊಳಿಸುವಂತೆ ಸ್ಥಳೀಯ ರೈತರು ಹಾಗೂ ಗ್ರಾಮಸ್ಥರು ಕಳೆದ 3 ವರ್ಷಗಳಿಂದ ಸರ್ಕಾರಕ್ಕೆ ಹಾಗೂ ಇಲಾಖೆಗಳ ಗಮನಕ್ಕೆ ನಿರಂತರವಾಗಿ ಮನವಿ ಸಲ್ಲಿಸುತ್ತಿದ್ದರೂ ಇದುವರೆಗೂ ಯಾವುದೇ ಶಾಶ್ವತ ಪರಿಹಾರ ಕೈಗೊಳ್ಳಬೇಕೆಂದು ನಿಯಮ 72ರ ಅಡಿಯಲ್ಲಿ ಮಾನ್ಯ ಸಚಿವರಲ್ಲಿ ಗಮನ ಸೆಳೆಯುತ್ತೇನೆ, ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಬೆಂಗಳೂರು ನಗರ ಕೆ ಮತ್ತು ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ 120 ಎಂ.ಎಲ್.ಡಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ಆನೇಕಲ್ ತಾಲ್ಲೂಕಿನ 67-ಕೆರೆಗಳನ್ನು ಹಾಗೂ ಕನಕಪುರ ತಾಲ್ಲೂಕಿನ ರಾವುತನಹಳ್ಳಿ ಮತ್ತು ಮಾವತ್ತೂರು ಕೆರೆ ಒಟ್ಟು 69 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ತುಂಬಿಸಲು ಯೋಜಿಸಲಾಗಿದ್ದು, ಪ್ರಸ್ತುತ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ 60 ಎಂ.ಎಲ್.ಡಿಯನ್ನು ಯೋಜಿತ ನೀರಿನ ಲಭ್ಯತೆಯ ಅನುಸಾರ 50 ಕೆರೆಗಳಿಗೆ ನೀರು ಹರಿಸಲಾಗುತ್ತಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಪೂರ್ಣ ಪ್ರಮಾಣದ ನೀರನ್ನು ಒದಗಿಸಿದಲ್ಲಿ ಬಾಕಿ 19 ಕೆರೆಗಳಿಗೆ ನೀರು ಹರಿಸಲು ಕ್ರಮ ವಹಿಸಲಾಗುವುದು.

ಮುಂದುವರೆದು, ಪ್ರಸ್ತುತ ವಿಧಾನಪರಿಷತ್ತಿನ ಸದಸ್ಯರು ಪ್ರಸ್ತಾಪಿಸಿರುವ ಕೆರೆಗಳಾದ ವಾಬಸಂದ್ರಕೆರೆ, ತಿರುಪಾಳ್ಯ, ಗವಿಕೆರೆ ಮತ್ತು ಯಾರಂಡಹಳ್ಳಿ ಕೆರೆಗಳು ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಒಳಪಡುತ್ತಿದ್ದು, ಇವುಗಳ ಒಟ್ಟಾರೆ ನೀರಿನ ಸಂಗ್ರಹಣ ಸಾಮರ್ಥ್ಯವು 15.28 ಎಂ.ಸಿ.ಎಫ್.ಟಿಗಳಾಗಿರುತ್ತದೆ. ಈ ಕೆರೆಗಳನ್ನು ತುಂಬಿಸಲು 2.5 ಎಂ.ಎಲ್.ಡಿ ಪ್ರತಿದಿನ ನೀರಿನ ಅವಶ್ಯಕತೆ ಇರುತ್ತದೆ. ಸದರಿ KC Valley STP ಯಲ್ಲಿ BWSSB ವತಿಯಿಂದ ಉನ್ನತೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು, ಮಾರ್ಚ್ 2027ರ ವೇಳೆಗೆ ಪೂರ್ಣಗೊಳ್ಳುವುದಾಗಿ ತಿಳಿಸಿರುತ್ತಾರೆ. ಕಾರಣ ಪೂರ್ಣ ಪ್ರಮಾಣದ ನೀರು ಲಭ್ಯ ವಾಗಿರುವುದಿಲ್ಲ. ಯೋಜನಗೆ ನಿಗದಿಪಡಿಸಲಾದ 120 ಎಂ.ಎಲ್.ಡಿ ನೀರಿನಲ್ಲಿ ಪ್ರಸ್ತುತ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಸರಾಸರಿ 40-60 ಎಂ.ಎಲ್.ಡಿ ನೀರನ್ನು ಮಾತ್ರ ಪೂರೈಸಲಾಗುತ್ತಿದ್ದು, BWSSB ಕಾಮಗಾರಿ ಪೂರ್ಣಗೊಂಡು ಹೆಚ್ಚಿನ ನಿರು KC Valley STP ಯಲ್ಲಿ ಲಭ್ಯ ವಾದಾಗ, ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೆಲವು ಗ್ರಾಮದ ಕೆರೆಗಳಾದ ವಾಬಸಂದ್ರ ಕೆರೆ, ತಿರುಪಾಳ್ಯ, ಗವಿಕೆರೆ ಮತ್ತು ಯಾರಂಡಹಳ್ಳಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಸಂಖ್ಯೆ: MID/62/LCQ/2026-.

(ಡಾ. ಅಜಯ್ ಧರ್ಮ ಸಿಂಗ್ )
ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು